# ನೀವು ಕೇಳಿದಿರಿ?

ಫಾಲನೇತ್ರ ಸಜ್ಜನ, ಶಿರಸಿ

*ಸೈನಿಕರು ಯಾವ ದೇವರನ್ನು ಪ್ರಾರ್ಥಿಸುತ್ತಾರೆ?*



ಸೈನಿಕ ಎಂದಮೇಲೆ ಇರುವುದೇ ಒಂದು ದೇವತೆ – ಭಾರತಮಾತೆ!

ಸುಶೀಲಾ ರಾಮಣ್ಣ, ಬೆಂಗಳೂರು

*ಬಡಿದು ಮಾಡುತ್ತಿದ್ದ ಜೋಳದ ರೊಟ್ಟಿಯನ್ನು ಇವತ್ತು ಲಟ್ಟಿಸಿ ಮಾಡುತ್ತಿದ್ದಾರಲ್ಲಾ...?*

ಲಟ್ಟಣಿಗೆಯ ಪ್ರಯೋಗದಿಂದ ಪತಿಯೇ ಹದಕ್ಕೆ ಬಂದುದನ್ನು ಕಂಡು ಹಿಟ್ಟಿನ ಮೇಲೂ ಸಫಲ ಪ್ರಯೋಗ ನಡೆಸಿರುವರಂತೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಮೊದಲು ಪ್ರೀತಿಸುವವರು ಹುಡುಗರೋ, ಹುಡುಗಿಯರೋ?*

ಹುಡುಗರೇ; ಪ್ರೀತ್ಸೇ ಪ್ರೀತ್ಸೇ ಎಂದು ಅರಚಿ, ಕುಡಿದು, ಕುಣಿದು, ಐಲಾದ ಮೇಲೆ ಹುಡುಗಿಯರು 'ಹ್ಲುಂ!' ಎನ್ನುತ್ತಾರೆ!

ಮುಕುಂದ ಹೆರಕಲ್ಲ, ಕಲಬುರ್ಗಿ

*ಜಗತ್ತಿನಲ್ಲಿ ಮೊದಲ ಬಾರಿಗೆ ಲಂಚ ಕೊಟ್ಟವರು ಯಾರು? ತೆಗೆದುಕೊಂಡವರು ಯಾರು?*




ಈವ್; ಪಡೆದವರು ಆಡಂ; ಲಂಚ ಸೇಬು.

ಅಮೃತೇಶ್ವರ ತಂಡರ, ಅಣ್ಣಿಗೇರಿ

*ಬ್ರಹ್ಮ ವಿಷ್ಣು ಮಹೇಶ್ವರಾದಿಯಾಗಿ ಪೌರಾಣಿಕ ದೇವತೆಗಳಿಗೆ ಇಬ್ಬರು ಹೆಂಡಿರು ಯಾಕೆ?*

ವಾಟ್ಸ್ಯಾಪ್ ಇಲ್ಲದ ಆ ಕಾಲದಲ್ಲಿ ಭಕ್ತ ಕೂಗಿದಾಕ್ಷಣ ದೇವ ಹೊರಹೊರಟರೆ ಮನೆಯಲ್ಲಿ ಒಬ್ಬಳಿಗೇ ಬೋರ್ ಆಗದಿರಲೆಂದು.

ಎಂ.ಎ. ಕುಮಾರ್, ಬೆಂಗಳೂರು

*ಹೆಣ್ಣು ಯಾವ ವಿಷಯದಲ್ಲಿ, ಸಂದರ್ಭದಲ್ಲಿ ಕುಗ್ಗುತ್ತಾಳೆ?*

ಪ್ರೀತಿಯಿಂದ ಬೆಳೆಸಿದ ಮಗ ಹೆಣ್ಣೊಬ್ಬಳೊಡನೆ ಅಸಭ್ಯವಾಗಿ ನಡೆದುಕೊಂಡಾಗ.

ಬೆಳ್ಳಾವೆ ರಮೇಶ್, ತುಮಕೂರು

*ಊಟಕ್ಕೆ ಮೊದಲೇ ತೇಗು ಬಂದಿದ್ದರಿಂದ ಹಿರಿಯರೊಬ್ಬರು ತಾಂಬೂಲ ತೊಗೊಂಡ್ಹೋಗಿ ಅಂದರಲ್ಲಾ...?*

ನಮ್ಮದು ಇಂದಿನ ಪದ್ಧತಿ; ರಿಸೆಪ್ಷನ್ ನಂತರ ಧಾರೆಯಂತೆಯೇ ತೇಗಿನ ನಂತರ ಭೋಜನ ಎಂದು ತಿಳಿಹೇಳಿ.

ಅಮರಯ್ಯಾ ಪತ್ರಿಮಠ, ಶೋರಾಪೂರ

*ದಾನವರಿಗೆ ತಾನೇ ವರ ಕೊಟ್ಟು ಅವರ ಸಂಹಾರಕ್ಕೆ ಅವತಾರ ಎತ್ತುವ ಹುನ್ನಾರವೇಕೆ ದೇವನಿಗೆ?*

'ಒಂದು ತಪ್ಮಾಡ್ಬಿಟ್ರೆ ಸರಿಮಾಡಕ್ಕೇನೇನು ಅವತಾರ ಆಡ್ಬೇಕಾಗತ್ನೋಡಿ' ಎಂದು ಮನುಜನಿಗೆ ತೋರಿಸಲು.

ಕುಮಾರ ಚಲವಾದಿ, ಹೊಳೆನರಸಿಪುರ

*ಗುಣ ನೋಡಿ ಹೆಣ್ಣು ಕೊಡು ಅಂತಾರಲ್ಲ, ಮದುವೆಗೆ ಮುಂಚೆ ಗುಣ ತಿಳಿಯುವುದು ಹೇಗೆ?*

ಹೆಣ್ಣು ನೋಡಲು ಬಂದವನು ಮನ ಮೆಚ್ಚುತ್ತಾನೋ, ಮನೆ ಮೆಚ್ಚುತ್ತಾನೋ ಎಂದು ಗಮನಿಸಿ.

ಹೆಚ್. ಗೋಪಿನಾಥ್, ಶಿವಮೊಗ್ಗ

*ಈ ಪ್ರಪಂಚದಲ್ಲಿ ಯಾವುದು ಶಾಶ್ವತ?*

ತೆರಿಗೆ, ಹೆರಿಗೆ, ಭೈರಿಗೆ...

ಎಚ್.ಆರ್. ಕಡಿವಾಲ, ಬದಾಮಿ

*ರಾಮರಾಜ್ಯದ ಕನಸು ನನಸಾಗಬೇಕಾದರೆ ಇನ್ನೂ ಏನು ಮಾಡಬೇಕು ಸಾರ್?*

ಆಂಜನೇಯನಂತೆ ಸರ್ಕಾರಕ್ಕೆ ನಿಷ್ಠೆಯುಳ್ಳ ಮಂತ್ರಿಗಳನ್ನು ಆರಿಸಬೇಕು.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಮನಸ್ಸು; ಇದರ ನಿಜವಾದ ಅರ್ಥ?*

ಕಾಳಿದಾಸನ ಭಾವರಸದಿಂದ ಖಾಲಿದೋಸೆಯ ನಾಲಿಗೆ ರುಚಿಗೆ ಠಣ್ಣನೆ ಜಿಗಿಯಬಲ್ಲ ಏಕೈಕ ವಾಹನ.

ರವಿ ಎಂ. ಪೈ, ಹೊನ್ನಾವರ

*ಮಹಿಳೆಯರಿಗೆ ಮೌನವೇ ಆಭರಣ. ಏಕೆ?*

ಹೆಚ್ಚಾಗಿ ಮಾತು ಬಿಟ್ಟಾಗಲೇ ಆಭರಣಗಳು ದೊರಕಿರುವುದರಿಂದ!

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಕತ್ತಲಿಗೇಕೆ ಬೆಳಕನ್ನು ಕಂಡರೆ ಹೆದರಿಕೆ?*

ಲೋಕಾಯುಕ್ತದವರಂತೆ ತಾನು ಬಚ್ಚಿಟ್ಟದ್ದೆಲ್ಲವನ್ನೂ ಸ್ಪಷ್ಟವಾಗಿ ತೋರಿಸಿಬಿಡುತ್ತದಲ್ಲ!

ಆರ್. ನಾಗರಾಜ್, ಗೊರೂರು

*ಪ್ರೀತಿ ಎನ್ನುವುದು ಕೊಡುವವನ ಔದಾರ್ಯವೋ, ಪಡೆಯುವವರ ಯೋಗ್ಯತೆಯೋ?*

ಎರಡೂ ಅಲ್ಲ. ಅದೊಂದು ಜಗತ್ತಿನ ಅತಿ ಸುಂದರವಾದ ಹುಚ್ಚು.

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ

*ವ್ಯಕ್ತಿಯ ಮೌಲ್ಯಮಾಪನಕ್ಕೆ ಅವನು ಪಡೆದ ಜನಪ್ರಿಯತೆಯೇ ಪ್ರಧಾನ ಮಾನದಂಡವೆ?*

ಹಾಗೇನಿಲ್ಲ. ಪಬ್ಲಿಕ್ಕಲ್ಲಿ ಮಾನ ದಂಡವಾದುದೂ ಪ್ರಧಾನ ಕಾರಣವಾಗಬಹುದು.

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ದೇವರು ಸರ್ವಶಕ್ತ, ಸರ್ವಾಂತರ್ಯಾಮಿ, ನೆನೆದವರ ಮನದಲ್ಲಿ; ಆದರೂ ಕಷ್ಟಕಾಲದಲ್ಲೇಕೆ ಕಾಣಲಾರ?*



ಕಾಣುತ್ತಾನೆ. 'ನೀವು ಕ್ಯೂನಲ್ಲಿದ್ದೀರಿ. ದಯವಿಟ್ಟು ನಿರೀಕ್ಷಿಸಿ' ಎಂದೂ ಹೇಳುತ್ತಾನೆ. ಕ್ಯೂಗಿಂತ ಮುಂಚೆ ಕಷ್ಟ ಮುಗಿದಿರುತ್ತದಷ್ಟೆ.

ಟಿ.ಎ. ನಾರಾಯಣಮೂರ್ತಿ, ಮೈಸೂರು

*ದೇವನೊಬ್ಬ ನಾಮ ಹಲವು ಎನ್ನುತ್ತಾರೆ. ನಾವು ಪೂಜೆ ಮಾಡುವ ದೇವರುಗಳಿಗೆ ಲೆಕ್ಕ ಇದೆಯೆ?*

ಅಗತ್ಯವಿಲ್ಲ. ತೆರಿಗೆಯನ್ನು ಯಾವ ಬ್ಯಾಂಕಲ್ಲಿ ಕಟ್ಟಿದರೂ ಸರ್ಕಾರಕ್ಕೇ ಸೇರುವಂತೆ ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ!

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ರಾಜಕಾರಣಿಗಳು ಬಿಳಿ ಬಟ್ಟೆ ಧರಿಸುವ ಬದಲು ಕಪ್ಪು ಬಟ್ಟೆ ಧರಿಸಿದರೆ ಹೇಗೆ?*

ಸಲ್ಲದು. ನ್ಯಾಯ, ನೀತಿ, ಧರ್ಮ, ಭಾವನೆಗಳ ಶವವನ್ನು ಹೊತ್ತ ಆ ದೇಹಗಳಿಗೆ ಬಿಳಿ ಹೊದಿಕೆಯೇ ಸರಿ.

■ ರಾಮ್